ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 1931

ಸದಸ್ಯರ ಹೆಸರು : ಶ್ರೀ. ಡಿ.ಎನ್. ಜೀವರಾಜ್ (ಶೃಂಗೇರಿ)

ಉತ್ತರಿಸಬೇಕಾದ ದಿನಾಂಕ : 11.07.2005

ಉತ್ತರಿಸುವ ಸಚಿವರು : ಮಾನ್ಯ ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಸಚಿವರು.

	ಪ್ರಶ್ನೆ	ಉತ್ತರ
ಅ	ಕುವೆಂಪು ಜೈವಿಕ ಅರಣ್ಯದ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ: ಹಾಗಿದ್ದಲ್ಲಿ ಯಾವ ಹಂತದಲ್ಲಿದೆ	ಕುವೆಂಪು ಅರಣ್ಯಧಾಮಕ್ಕಾಗಿ ಶಿವಮೊಗ್ಗ ಮತ್ತು ಚಿಕ್ಕಮಂಗಳೂರು ಜಿಲ್ಲೆಗಳ ಒಟ್ಟು 23.595.24 ಎಕರೆಗಳನ್ನು ಈಗಾಗಲೇ ಗುರುತಿಸಲಾಗಿದೆ. ಸದರಿ ಪ್ರದೇಶದ ಮೋಜಣಿ ಕಾರ್ಯ ಮುಗಿದಿದ್ದು ಗಡಿಕಲ್ಲನ್ನು ಹಾಕುವ ಕಾರ್ಯ ಪ್ರಗತಿಯಲ್ಲಿದೆ.
ಅ	ಕೊಪ್ಪ ತಾಲ್ಲೂಕಿನ ಎಷ್ಟು ವಿಸ್ತೀರ್ಣ ಈ ಅರಣ್ಯಕ್ಕೆ ಸೇರ್ಪಡೆಯಾಗಲಿದೆ: (ಗ್ರಾಮವಾರು, ವಿಸ್ತೀರ್ಣ, ಸರ್ವೆನಂ ವಿವರ ನೀಡುವುದು:)	ಕುವೆಂಪು ಅರಣ್ಯಧಾಮಕ್ಕೆ ಸೇರ್ಪಡೆಯಾಗಲಿರುವ ಕೊಪ್ಪ ತಾಲ್ಲೂಕಿನ ಪ್ರದೇಶದ ವಿವರಗಳು ಈ ಕೆಳಕಂಡಂತಿವೆ:-

ಗ್ರಾಮ	ಸ.ನಂ.	ವಿಸ್ತೀರ್ಣ (ಎಕರೆಗಳಲ್ಲಿ)
ಕೆಳಕುಳಿ	11	230.00
	16	485.00
	38	118.00
	53	479.20
	85	740.00
ಹಿರೇಕೊಡಿಗೆ	121	55.00
	14	345.18

			144	384.02
			188	27.00
			101	105.00
			99	107.00
			151	47.00
			98	370.00
			102	2.00
		ಬೊಮ್ಲಾಪುರ	89	189.27
			164	114.08
			15	170.12
			66	113.20
			74	308.17
		ಭೋಳಾಪುರ	73	40.08
			31	1.08
			32	48.20
			33	34.00
			38	155.00
			57	55.20
			84	52.20
			85	185.08
		ಕಗ್ಗ	17	30.28
			27	17.12
			34	8.00
		ಕುಂಬಾರಕೊಪ್ಪ	52	135.00
			54	80.00

			55	40.00
			76	70.00
			104	0.04
			124	2.08
		ಅಡ್ಡಡ	80	228.00
			15	19.24
			101	28.36
			55	20.32
			43	207.00
			39	394.20
			20	48.20
			33	77.08
			34	66.20
			38	3.00
			19	10.32
			23	5.32
			229	44.01
			18	13.24
			11	36.00
			133	140.0
			127	11.06
		ಗುಣವಂತ	22	773.08
			27	54.15
			28	32.04
			29	72.32

			31	6.24
			36	176.28
			78	12.04
			90	147.28
			93	26.07
			94	2.32
			95	16.12
			96	19.08
			97	65.00
			98	29.36
			109	21.24
			113	30.24
			114	53.16
			123	1.27
			145	37.00
			146	16.90
			147	66.20
		ಕೆಳಕುಳಿ	61	294.15
			68	265.11
		ಒಟ್ಟು		8636.25
ಇ	ಅನೇಕ ವರ್ಷಗಳಿಂದ ಅಲ್ಲಿ ವಾಸಿಸುತ್ತಿರುವ ರೈತರ ಮನೆ, ಕೊಟ್ಟಿಗೆ, ಕಣ ಇತ್ಯಾದಿಗಳನ್ನು ಈ ಅರಣ್ಯದ ವ್ಯಾಪ್ತಿಯಿಂದ ಹೊರ ಗಿಡಲು ಸರ್ಕಾರ ಕ್ರಮಕೈಗೊಳ್ಳು ವುದೇ:-	ರೈತರು ವಾಸಿಸುತ್ತಿರುವ ಮನೆ, ಕೊಟ್ಟಿಗೆ, ಕಣ ಇತ್ಯಾದಿಗಳನ್ನು ಕುವೆಂಪು ಅರಣ್ಯ ಧಾಮದ ವ್ಯಾಪ್ತಿಯಿಂದ ಹೊರತು ಪಡಿಸಲಾಗಿದೆ.		

ಈ	ಈ ಕೊಪ್ಪ ತಾಲ್ಲೂಕಿನ ಈ ಅರಣ್ಯ ವ್ಯಾಪ್ತಿಯಲ್ಲಿ ಬರುವ ರೈತರ ಗದ್ದೆ, ಅಡಿಕೆ ತೋಟದ ವಿಸ್ತೀರ್ಣವೆಷ್ಟು? (ಗ್ರಾಮಾಂತರ ವಿವರ ನೀಡುವುದು:)	ಕುವೆಂಪು ಅರಣ್ಯಧಾಮದ ವ್ಯಾಪ್ತಿಯಲ್ಲಿ ಬರುವ ರೈತರ ಗದ್ದೆ, ಅಡಿಕೆ ತೋಟ ಇತ್ಯಾದಿಗಳ ವಿವರ ಈ ಕೆಳಕಂಡಂತಿವೆ:-

ಗ್ರಾಮ	ವಿಸ್ತೀರ್ಣ (ಎಕರೆಗಳಲ್ಲಿ)
ಹಿರೀಕೊಡಿಗೆ	192.03
ಗುಣವಂತೆ	113.05
ಅಡ್ಡಡ	504.10
ಅಮ್ಮಡಿ	89.38
ಕಗ್ಗಾ	52.21
ಕುಂಬಾರಕೊಪ್ಪ	43.31
ಭೋಳಾಪುರ	38.06
ಬೊಮ್ಮಪುರ	167.05
ಒಟ್ಟು	**1200.21**

ಪ್ರಶ್ನೆ ಸಂಖ್ಯೆ 4931

ಶ್ರೀ ಕೆ. ಶ್ರೀನಿವಾಸಗೌಡ (ಕೃಷಿ ಸಚಿವರು) (ಅರಣ್ಯ ಮತ್ತು ಪರಿಸರ ಸಚಿವರ ಪರವಾಗಿ):– ಮಾನ್ಯ ಅಧ್ಯಕ್ಷರೇ, ಈ ಪ್ರಶ್ನೆಗೆ ಸಂಬಂಧಿಸಿದಂತೆ ಕೆಲವು ಇನ್‌ಫಾರ್ಮೇಷನ್ ಬೇಕಾಗಿರುವುದರಿಂದ ಸಮಯ ಕೇಳಿದ್ದೇವೆ.

ಶ್ರೀ ಡಿ.ಎನ್. ಜೀವರಾಜ್:– ಸಮಯ ಬೇಕು ಎಂದರೆ, ಯಾವಾಗ ಉತ್ತರ ಕೊಡುತ್ತಾರೆ?

ಅಧ್ಯಕ್ಷರು : ನಾನು ಉತ್ತರ ಕೊಡಿಸುತ್ತೇನೆ.

ಶ್ರೀ ಡಿ.ಎನ್. ಜೀವರಾಜ್: ಸರಿ.

ಪ್ರಶ್ನೆ ಸಂಖ್ಯೆ 5067

(ಈ ಸಮಯದಲ್ಲಿ ಮಾನ್ಯ ಸದಸ್ಯರಾದ ಶ್ರೀ ಹೆಚ್.ಸಿ. ಬಾಲಕೃಷ್ಣರವರು ಸದನದಲ್ಲಿ ಹಾಜರಿರಲಿಲ್ಲ)

ಶ್ರೀ ಕೆ. ಪ್ರಭಾಕರ ಬಂಗೇರ :– ಮಾನ್ಯ ಅಧ್ಯಕ್ಷರೇ, ನನ್ನದೊಂದು ಪ್ರಶ್ನೆ ಇತ್ತು.

ಪ್ರಶ್ನೆ ಸಂಖ್ಯೆ 4448

ಅಧ್ಯಕ್ಷರು :– ಅದಕ್ಕೆ ಲೋಕೋಪಯೋಗಿ ಸಚಿವರು ಬರಬೇಕು.

ಶ್ರೀ ಕೆ. ಪ್ರಭಾಕರ ಬಂಗೇರ :– ಸಿಂಧ್ಯಾರವರು ಇದ್ದಾರಲ್ಲ. ಅವರೇ ಇದಕ್ಕೆ ಉತ್ತರ ಕೊಡಬಹುದು.

ಅಧ್ಯಕ್ಷರು :– ಸಿಂಧ್ಯಾರವರೇ ಲೋಕೋಪಯೋಗಿ ಸಚಿವರು ಆ ಮನೆಗೆ ಹೋಗಿದ್ದಾರೆ. ಅವರ ಪರವಾಗಿ ತಾವು ಉತ್ತರ ಕೊಡುವಿರಾ ?

ಶ್ರೀ ಪಿ.ಜಿ.ಆರ್. ಸಿಂಧ್ಯಾ :– ಮಾನ್ಯ ಅಧ್ಯಕ್ಷರೇ, ನಮ್ಮ ವಿರೋಧ ಪಕ್ಷದ ಸದಸ್ಯರುಗಳು ಕೆಲವು ವಿಚಾರಗಳ ಬಗ್ಗೆ ಇಲ್ಲಿ ಪ್ರಸ್ತಾಪ ಮಾಡಿದ್ದರಿಂದ, ಈ ಸದನದ ಕಾರ್ಯಕಲಾಪಗಳು ಕೆಲವು ದಿನಗಳ ಕಾಲ ನಿಂತು ಹೋಗಿದ್ದರಿಂದ, ಅವರು ಒಂದು ಹೇಳಿಕೆಯನ್ನು ಕೊಡಬೇಕೆಂದು ಈ ಸದನದಲ್ಲಿ ಬೆಳಿಗ್ಗೆ ಯಾವ ರೀತಿ ಮಾನ್ಯ ವಿರೋಧ ಪಕ್ಷದ ನಾಯಕರು ಮತ್ತು ಇತರ ಗೌರವಾನ್ವಿತ ಸದಸ್ಯರ ಒತ್ತಾಯದ ಮೇರೆಗೆ ಅವರು ಹೇಳಿಕೆಯನ್ನು ಕೊಟ್ಟರೋ, ಅದೇ ರೀತಿ ಮೇಲ್ಮನೆಯಲ್ಲೂ ಹೇಳಿಕೆ ಕೊಡಲು ಅವರು ಹೋಗಿದ್ದಾರೆ. ಅದ್ದರಿಂದಾಗಿ

ಅವರು ಇಲ್ಲಿಗೆ ಬರಲು ಆಗಿಲ್ಲ. ಮೇಲ್ಮನೆಯಲ್ಲಿ ಈಗ ಪ್ರಶ್ನೋತ್ತರ ವೇಳೆ ಇರುವುದರಿಂದ, ಅಲ್ಲಿ ನನ್ನ ಪ್ರಶ್ನೆಗಳೂ ಇವೆ.ನಾನು ಅಲ್ಲಿಗೆ ಹೋಗಬೇಕಾಗಿದೆ. ಆದರೆ ಇದೊಂದು ಪ್ರಶ್ನೆಗೆ ನಾನು ಉತ್ತರ ಕೊಡಬಲ್ಲೆ. ಇದೊಂದು ಫೈಲ್ ನನ್ನ ಹತ್ತಿರ ಇದೆ.

ಅಧ್ಯಕ್ಷರು :– ಅವರದು ಬಹಳ ಪ್ರಶ್ನೆಗಳಿವೆ. ಇವತ್ತು 5–6ಪ್ರಶ್ನೆಗಳಿವೆ.

ಶ್ರೀ. ಪಿ.ಜಿ.ಆರ್. ಸಿಂಧ್ಯಾ :– ಆ ಫೈಲ್‌ಗಳನ್ನೆಲ್ಲಾ ತರಿಸಿ ನಾನು ಉತ್ತರ ಕೊಡುತ್ತೇನೆ. ಅದಕ್ಕೇನೂ ತೊಂದರೆಯಿಲ್ಲ. ಲೋಕೋಪಯೋಗಿ ಸಚಿವರು ಅಮೇರಿಕಾದಲ್ಲಿದ್ದುದರಿಂದ ಕಳೆದ ಒಂದು ವಾರದ ಅವಧಿಯಲ್ಲಿ ಲೋಕೋಪಯೋಗಿ ಮತ್ತು ಇಂಧನ ಇಲಾಖೆಗೆ ಸಂಬಂಧಪಟ್ಟ ಎಲ್ಲಾ ಪ್ರಶ್ನೆಗಳಿಗೆ, ನಾನು ಸಂಬಂಧಪಟ್ಟ ಅಧಿಕಾರಿಗಳ ಜೊತೆ ಸಭೆಯನ್ನು ನಡೆಸಿ ನಾನೇ ಉತ್ತರಗಳನ್ನು ತಯಾರು ಮಾಡಿ, ಉತ್ತರಗಳಿಗೆ ನಾನೇ ಸಹಿ ಹಾಕಿರತಕ್ಕಂಥಾದ್ದು ತಮ್ಮ ಗಮನಕ್ಕೆ ಬಂದಿದೆ. ಆದ್ದರಿಂದಲ್ಲೇ, ಗೌರವಾನ್ವಿತ ಸದಸ್ಯರಾದ ಬಂಗೇರಾರವರು ಸಿಂಧ್ಯಾರವರೇ ಉತ್ತರ ಕೊಡಬಹುದಲ್ಲ ಎಂದು ಹೇಳಿದ್ದು, ಆ ಪ್ರಶ್ನೆಗೆ ನಾನು ಉತ್ತರವನ್ನು ಕೊಡುತ್ತೇನೆ.

ಅಧ್ಯಕ್ಷರು :– ಅವರದು 5–6 ಪ್ರಶ್ನೆಗಳಿವೆ.

ಶ್ರೀ ಪಿ.ಜಿ.ಆರ್. ಸಿಂಧ್ಯಾ :– ಆ ಫೈಲ್‌ಗಳನ್ನು ತರಿಸಿಕೊಂಡು ಉತ್ತರ ಹೇಳುತ್ತೇನೆ. ಈಗ ಬೇರೆ ಪ್ರಶ್ನೆಯನ್ನು ತೆಗೆದುಕೊಂಡಿರಿ. ಅಷ್ಟರಲ್ಲಿ ಫೈಲ್‌ಗಳನ್ನು ತರಿಸುತ್ತೇನೆ. ಎಲ್ಲಾ ಪ್ರಶ್ನೆಗಳಿಗೆ ನಾನು ಉತ್ತರ ಕೊಡುತ್ತೇನೆ. ಆದರೆ ಕೌನ್ಸಿಲ್‌ನಲ್ಲಿ ಪ್ರಶ್ನೋತ್ತರ ವೇಳೆಯಲ್ಲಿ ನನ್ನದೂ ಪ್ರಶ್ನೆ ಇರುವುದರಿಂದ ಇಕ್ಕಟ್ಟಿನ ಪರಿಸ್ಥಿತಿಯಾಗಿದೆ. ಏನು ಮಾಡುವುದು ಹೇಳಿ? ಆಗಲಿ, ಉತ್ತರ ಕೊಡೋಣ, ಅದಕ್ಕೇನಂತೆ.

ಶ್ರೀ ಗೋವಿಂದಪ್ಪ ಮಕಟಪ್ಪ ಕಾರಜೋಳ :– ಮಾನ್ಯ ಅಧ್ಯಕ್ಷರೇ, ಲಿಖಿತ ಮೂಲಕ ಏನು ಉತ್ತರಗಳನ್ನು ಒದಗಿಸುತ್ತೀರಿ, 4ನೇ ತಾರೀಖಿನಿಂದ ಇವತ್ತಿನವರೆಗೂ ನನಗೆ ಉತ್ತರ ಬಂದಿಲ್ಲ. ಈ ಬಗ್ಗೆ ನಾನು ಸುಮಾರು 10 ಸಲ ಅಧಿಕಾರಿಗಳಿಗೆ ಹೇಳಿದ್ದೇನೆ. ಒಂದು ವೇಳೆ ಉತ್ತರ ಕೊಡಲಿಕ್ಕೆ ಆಗದೇ ಇದ್ದರೆ ದಯಮಾಡಿ ಅವುಗಳನ್ನು ಇಲ್ಲಿ ಮಂಡಿಸುವುದೇ ಬೇಡ. ಏಕೆ ಮಂಡಿಸುತ್ತೀರಿ.

ಅಧ್ಯಕ್ಷರು :– ಉತ್ತರಗಳು ಬಂದಿಲ್ಲವೇ?

ಶ್ರೀ ಗೋವಿಂದಪ್ಪ ಮಕಟಪ್ಪ ಕಾರಜೋಳ :– 10 ಸಾರಿ ಹೇಳಿದ್ದರೂ ನನಗೆ ಉತ್ತರಗಳೇ ಬಂದಿಲ್ಲ. ಇಷ್ಟು ಬೇಜವಾಬ್ದಾರಿಯಿಂದ ಸರ್ಕಾರ ನಡೆಸುವುದಾದರೆ ಏತಕ್ಕೆ ಮಾಡುತ್ತೀರಿ?

(ಗೊಂದಲ)

ಅಧ್ಯಕ್ಷರು:– ನಾಳೆ ನೆನಪಿಸಿ. ನಾನು ವಿಚಾರಿಸಿ ಉತ್ತರ ಕೊಡಿಸುತ್ತೇನೆ.

ಶ್ರೀ ಡಿ.ಎಸ್. ಜೀವರಾಜ್ :– ಮಾನ್ಯ ಅಧ್ಯಕ್ಷರೇ, ಹಿಂದಿನ ಅಧಿವೇಶನದಲ್ಲಿ ನಾನು ಕೇಳಿದಂಥ ಪ್ರಶ್ನೆಗಳಿಗೆ ಸರ್ಕಾರದಿಂದ ಉತ್ತರ ಬಂದಿಲ್ಲ.

ಶ್ರೀ ಪಿ.ಜಿ.ಆರ್. ಸಿಂಧ್ಯಾ :– ನಾವು ಯಾರೂ ಸಹಿತ ಈ ಸದನದಲ್ಲಿ ಮಾನ್ಯ ಗೌರವಾನ್ವಿತ ಸದಸ್ಯರುಗಳು ಕೇಳಿರತಕ್ಕಂಥ ಪ್ರಶ್ನೆಗಳಿಗೆ ಉತ್ತರಗಳನ್ನು ಕೊಡಬಾರದೆನ್ನುವುದು ಏನು ಸಹಿತ ಇಲ್ಲ. ಉತ್ತರಗಳನ್ನು ಕೊಡುತ್ತೇವೆ. ಆದರೆ ಕೆಲವು ಪ್ರಶ್ನೆಗಳಿಗೆ ನಾವು ವಿಶೇಷವಾಗಿ ವರದಿಯನ್ನು ತರಿಸಿಕೊಳ್ಳಬೇಕಾಗುತ್ತದೆ. ಕೆಳಹಂತದಲ್ಲಿ ವರದಿಗಳನ್ನು ತರಿಸಿಕೊಳ್ಳುವುದಕ್ಕೆ ಸ್ವಲ್ಪ ಸಮಯ ಬೇಕಾಗುತ್ತದೆಂದು ಸ್ವಲ್ಪ ಸಮಯ ಕೇಳಿದ್ದೇವಷ್ಟೆ. ಉತ್ತರಗಳನ್ನು ಖಂಡಿತ ಕೊಡಬೇಕಾಗುತ್ತದೆ. ಕೊಡೋಣ.

ಶ್ರೀ ಡಿ.ಎಸ್. ಜೀವರಾಜ್ :– ಮಾನ್ಯ ಅಧ್ಯಕ್ಷರೆ, ಹಿಂದಿನ ಅಧಿವೇಶನದಲ್ಲಿ ನಾನು ಕೇಳಿದಂಥ ಕೆಲವು ಪ್ರಶ್ನೆಗಳಿಗೆ ಉತ್ತರ ಬಂದಿಲ್ಲ. ಈಗಾಗಲೇ ಮೂರು ತಿಂಗಳು ಕಳೆದಿದೆ. ಈ ರೀತಿ ಆದರೆ ನಮಗೆ ಬಹಳ ಕಷ್ಟವಾಗುತ್ತದೆ.